ಕೃಷಿ ಮಾರುಕಟ್ಟೆ ಇಲಾಖೆ ವತಿಯಿಂದ ಮಾಗಡಿ ತಾಲ್ಲೂಕಿಗೆ ಅಭಿವೃದ್ಧಿ ಕಾರ್ಯಕ್ರಮ.

123(276) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1997-98, 98-99ನೇ ಸಾಲಿನಲ್ಲಿ ಕೃಷಿ ಮಾರುಕಟ್ಟೆ ಇಲಾಖೆಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು; ಅದಕ್ಕಾಗಿ ವ್ಯಯಿಸಿದ ಹಣವೆಷ್ಟು; (ಕಾಮಗಾರಿಗಳ ವಿವರ ನೀಡುವುದು)

ಆ) 1996-97ನೇ ಸಾಲಿನ ಕಾಮಗಾರಿಗಳಿಗೆ ಈವರೆವಿಗೂ ಹಣ ಬಿಡುಗಡೆ ಮಾಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಕಾರಣವೇನು ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) 1997-98ನೇ ಸಾಲಿನಲ್ಲಿ ಯಾವುದು ಇರುವುದಿಲ್ಲ. 1998-99ನೇ ಸಾಲಿನಲ್ಲಿ ಮಾಗಡಿ ತಾಲ್ಲೂಕು ಕುದೂರು ಸಂತೆಮೈದಾನದಲ್ಲಿ ಹರಾಜುಕಟ್ಟೆಯನ್ನು 1.50 ಲಕ್ಷ ರೂ.ಗಳಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 1996-97ನೇ ಸಾಲಿನ ಅನುದಾನದ ಮೊತ್ತ ರೂ. 15.00 ಲಕ್ಷಗಳಲ್ಲಿ ಈಗಾಗಲೇ ರೂ.10.00 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ಇ) ಪ್ರಗತಿ ವರದಿ ಬಂದಿಲ್ಲದ ಕಾರಣ ಉಳಿದ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಿರುವುದಿಲ್ಲ.

ಪ್ರಗತಿ ವರದಿ ಪಡೆದು, ಉಳಿದ ರೂ. 5.00 ಲಕ್ಷಗಳು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ತೋಟಗಾರಿಕೆ ಬೆಳೆಗಳಿಗೆ ಸಬ್ಸಿಡಿ.

124(112) ಶ್ರೀಬಸವನಗೌಡ ರಾಮನಗೌಡ ಪಾಟೀಲ್ (ವಿಜಾಪುರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97,97-98 ಹಾಗೂ 98-99ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಸಬ್ಸಿಡಿ ರೂಪದಲ್ಲಿ ನಿಗಡಿಪಡಿಸಿದ ಹಣವೆಷ್ಟು? ಮಂಜೂರು ಮಾಡಿದ ಹಣವೆಷ್ಟು? ಹಾಗೂ ಖರ್ಚಾದ ಹಣವೆಷ್ಟು? (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.